# M.R. campign Hospital List

| Sl.No. | Doctor Name | Name of the Hospital | Address | Ph No |
|---|---|---|---|---|
| 1 | | Ambedkar Medical College Hospital | | |
| 2 | | Bapfinst Hospital | Airport Road | |
| 3 | | Manipal Hospital | odd Airport Road | |
| 4 | | command Hospital | Agaram | |
| 5 | | Bowring and Lady curzon Hospital | | |
| 6 | | Gosha Hospital | | |
| 7 | | M.S.Ramiah Hospital | | |
| 8 | | KIMS | | |
| 9 | | Vani Vilas Hospital | | |
| 10 | Dr.Jaya Kumar | Kusuma Hospital | T.R.Mill | |
| 11 | Dr.vishwanath | Radha Krishna Hospital | Girinagar | |
| 12 | | Radha tree Hospital | Hanumanthanagara | |
| 13 | | Meenakshi Hospital | | |
| 14 | | Aditya Clinic | K.G.Halli | |
| 15 | | Columbia Ashya Hospital | 26/4, Brigade Gate way. | 080-39898969<br>9008504786 |
| 16 | Dr.Supraja | People Tnee Hospital | Goraguite Palya | 9886794241 |
| 17 | | Panacea Hospital | Basaweshwanagara | 808-43307774<br>Email ID:<br>ms@panaceahospital.com |
| 18 | | ESIC Hospital | Rajajingara , Indranagra | |
| 19 | | Vasan Hospital | K.S.Layout | |
| 20 | | Sagar Hospital | K.S.Layout | |
| 21 | | Sagar Hospital | Tilaknagara | |
| 22 | | Mallige child care | Vijayanagar | |
| 23 | | Gurushree Hospital | Chandra layout | |
| 24 | | Jayanagara General Hospital | | |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಆಯುಕ್ತರು ಕೇಂದ್ರ ಕಛೇರಿ, ಎನ್.ಆರ್.ಚೌಕ, ಬೆಂ-02**

---

**ದಿನಾಂಕ: 28-01-2017 ರಂದು ಆಯುಕ್ತರ ಕಛೇರಿ, ಸಭಾಂಗಣ01 ರಲ್ಲಿ ನಡೆಸಲಾದ ಮೀಸೆಲ್ಸ್- ರುಬೆಲ್ಲಾ ಅಭಿಯಾನದ 2ನೇ ಸುತ್ತಿನ ಡಿಸ್ಟ್ರಿಕ್ ಟಾಸ್ಕ್‌ಫೋರ್ಸ್ ಸಭೆಯ ನಡವಳಿಗಳು:-**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ವಿವರ:-**

- ಮಾನ್ಯ ಆಯುಕ್ತರು. ಬಿಬಿಎಂಪಿ.
- ಡಾ॥ ನಿರ್ಮಲ ಬುಗ್ಗಿ ಮುಖ್ಯ ಆರೋಗ್ಯಾಧಿಕಾರಿ(ಕ್ಲಿನಿಕಲ್)., ಬಿ.ಬಿ.ಎಂ.ಪಿ.
- ಡಾ॥ ಎಂ. ಲೋಕೇಶ್. ಮುಖ್ಯ ಆರೋಗ್ಯಾಧಿಕಾರಿ(ಸಾ.ಆ)., ಬಿ.ಬಿ.ಎಂ.ಪಿ.
- ಡಾ॥ ಲೋಕೇಶ್. ಎಸ್.ಆರ್.ಟಿ.ಎಲ್ ಕರ್ನಾಟಕ ಡಬ್ಲ್ಯೂ.ಹೆಚ್.ಓ.
- ಡಾ॥ ನಾಗರಾಜು. ಎಸ್.ಎಂ.ಓ.  ಎನ್.ಪಿ.ಎಸ್.ಪಿ.
- ಡಾ॥ ಪಿ.ಕೆ.ಶ್ರೀನಿವಾಸ್., ರಾ.ನ.ಆ.ಕಾ ಸಲಹೆಗಾರರು .
- ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ, ಬಿಬಿಎಂಪಿ.
- ಡಾ॥ ಜಯಂತಿ., ಜಲ್ಲಾ ಆರ್.ಸಿ.ಹೆಚ್ ಕಛೇರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
- ಕ್ಷೇತ್ರಾ ಶಿಕ್ಷಣಾಧಿಕಾರಿಗಳು ಬೆಂಗಳೂರು ಉತ್ತರ/ದಕ್ಷಿಣ/ಬಿಬಿಎಂಪಿ.
- ಶಿಶು ಅಭಿವೃದ್ದಿ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. ಬೆಂಗಳೂರು.
- ಎಲ್ಲಾ ವಲಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್-ನಾನ್ ಕ್ಲಿನಿಕಲ್) / ಆರೋಗ್ಯ ವೈದ್ಯಾಧಿಕಾರಿಗಳು ಬಿಬಿಎಂಪಿ.
- ಅಧೀಕ್ಷಕರು ರೆಫರಲ್ ಆಸ್ಪತ್ರೆ, ಬಿಬಿಎಂಪಿ.
- ರೋಟರಿ ಪ್ರತಿನಿಧಿ.
- ವೈದ್ಯರು ಕಾಮ್ಯಾಂಡೋ ಆಸ್ಪತ್ರೆ, ಬೆಂಗಳೂರು.
- ವೈದ್ಯರು ಡಿ.ಆರ್.ಡಿ.ಓ. ಆಸ್ಪತ್ರೆ, ಬೆಂಗಳೂರು.
- ಮುಖ್ಯಸ್ಥರು, ಸಮುದಾಯ ವಿಭಾಗ, ಎಂ.ಎಸ್.ರಾಮಯ್ಯ/ ಕೆಂಪೇಗೌಡ/ ಸೆಂಟ್‌ಜಾನ್ಸ್ / ಬೆಂಗಳೂರು ವೈದ್ಯಕೀಯ ಮಹಾವಿದ್ಯಾನಿಲಯ, ಬೆಂಗಳೂರು.

***

"ಆರೋಗ್ಯವೇ ಭಾಗ್ಯ, ಆರೋಗ್ಯವಂತ ಮಕ್ಕಳು ದೇಶದ ಸಂಪತ್ತು" ಎಂಬ ಮಾತಿನಂತೆ ಭಾರತ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ, ನವದೆಹಲಿ ಇವರ ಮಾರ್ಗಸೂಚಿಯಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ: 07-02-2017 ರಿಂದ 28-02-2017 ರವರೆಗೆ 9 ತಿಂಗಳಿಂದ 15 ವರ್ಷದೊಳಗಿನ ಮಕ್ಕಳಿಗೆ ಮೀಸೆಲ್ಸ್- ರುಬೆಲ್ಲಾ ಅಭಿಯಾನದ ಡಿಸ್ಟ್ರಿಕ್ ಟಾಸ್ಕ್‌ಫೋರ್ಸ್ ಸಭೆಯನ್ನು ದಿನಾಂಕ: 28-01-2017 ರಂದು ಮಧ್ಯಾಹ್ನ- 12.00 ಗಂಟೆಗೆ ಪ್ರಾರಂಭಿಸಲಾಯಿತು. ಈ ಸಭೆಯ ಅಧ್ಯಕ್ಷತೆಯನ್ನು ಮಾನ್ಯ ಆಯುಕ್ತರು, ಬಿಬಿಎಂಪಿ ರವರು ವಹಿಸಿದ್ದು, ಈ ಸಭೆಯಲ್ಲಿ ಹಾಜರಿದ್ದ

ಎಲ್ಲಾ ಅಧಿಕಾರಿಗಳಿಗೆ ಡಾ॥ ಕಲಾವತಿದೇವಿ.ಎ.ಎಲ್., ಆರ್.ಸಿ.ಹೆಚ್ ಅಧಿಕಾರಿ ರವರು ಸ್ವಾಗತವನ್ನು ಕೋರಿದರು.

- ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಾರ್ಗಸೂಚಿಯಂತೆ, ದೇಶದ 5 ಜಿಲ್ಲೆಗಳಲ್ಲಿ ಪ್ರಥಮ ಹಂತದಲ್ಲಿ ಅಭಿಯಾನವನ್ನು ಪ್ರಾರಂಭಿಸಲು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಕರ್ನಾಟಕವು ಒಂದು ರಾಜ್ಯವಾಗಿದ್ದು, ರಾಜ್ಯದಲ್ಲಿ ಫೆಬ್ರವರಿ ತಿಂಗಳಲ್ಲಿ ನಡೆಯುವ ಅಭಿಯಾನದಲ್ಲಿ ಪಾಲಿಕೆಯಲ್ಲಿ ಸುಮಾರು 16 ಲಕ್ಷ 9 ತಿಂಗಳಿಂದ 15 ವರ್ಷದೊಳಗಿನ ಮಕ್ಕಳು ಇರುವುದಾಗಿ ತಿಳಿಸಿದರು. ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ 135 ವಾರ್ಡ್‌ಗಳಲ್ಲಿ ಅರ್ಹ ಫಲಾನುಭವಿ ಮಕ್ಕಳು ಸುಮಾರು 12 ಲಕ್ಷ ಇದ್ದು, ಈ ಮಕ್ಕಳಿಗೆ ಮೊದಲನೇ ಹಂತದಲ್ಲಿ ಮೀಸೆಲ್ಸ್-ರುಬೆಲ್ಲಾ ಚುಚ್ಚುಮದ್ದನ್ನು ನೀಡಲಾಗುವುದು. ನಂತರ ಈ ಲಸಿಕೆಯನ್ನು ಸಾರ್ವತ್ರಿಕ ಲಸಿಕಾ ಕಾರ್ಯಕ್ರಮದ ಅಡಿಯಲ್ಲಿ ಅಳವಡಿಸಲಾಗುವುದು. ಈ ಅಭಿಯಾನ ಕಾರ್ಯಕ್ರಮದಲ್ಲಿ ಶೇ.95 ರಷ್ಟು ಸಾಧನೆಯನ್ನು ಮಾಡುವ ಗುರಿಯನ್ನು ಸರ್ಕಾರವು ಹೊಂದಿದೆ.
- ಅಭಿಯಾನ ಕಾರ್ಯಕ್ರಮವು 3 ವಾರಗಳು ನಡೆಯುತ್ತಿದ್ದು, 1ನೇ ವಾರದಲ್ಲಿ ಶಾಲಾ ಮಕ್ಕಳಿಗೆ ಚುಚ್ಚುಮದ್ದನ್ನು ಹಾಕುವುದು.
- 2 ಮತ್ತು 3ನೇ ವಾರದಲ್ಲಿ ಅಂಗನವಾಡಿ ಮಕ್ಕಳಿಗೆ ಹಾಗೂ ಸಮುದಾಯ ಆಧಾರಿತ ಮಕ್ಕಳುಗಳಿಗೆ ಲಸಿಕೆಯನ್ನು ಹಾಕಲು ವ್ಯವಸ್ಥೆ ಮಾಡಲಾಗಿದೆ.
- 4ನೇ ವಾರದಲ್ಲಿ ಶಾಲೆಗಳಲ್ಲಿ ಮತ್ತು ಸಮುದಾಯದಲ್ಲಿ ಬಿಟ್ಟುಹೋದ ಮಕ್ಕಳುಗಳಿಗೆ ಲಸಿಕೆ ಹಾಕುವುದು.
- [redacted] ಆಯುಕ್ತರು ಮತಾನಾಡುತ್ತಾ ಮಾಹಿತಿ, ಶಿಕ್ಷಣ, ಸಂಪರ್ಕ ಕಾರ್ಯಕ್ರಮಗಳಿಗೆ ಹೆಚ್ಚು ಒತ್ತನ್ನು ನೀಡುವಂತೆ ಸಭೆಯಲ್ಲಿ ಅಧಿಕಾರಿಗಳಿಗೆ ತಿಳಿಸಿದರು. ಪಾಲಿಕೆಯ ಆರೋಗ್ಯ ಕೇಂದ್ರಗಳ ಕಾರ್ಯಚಟುವಟಿಕೆಗಳ ಸಂಪೂರ್ಣ ಮೈಕ್ರೋಪ್ಲಾನ್ ತಯಾರಿಸಲು ಸೂಚಿಸಿದರು. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ವಾರ್ಡ್‌ಗಳ ನಕ್ಷೆ ಪಡೆದು ಲಸಿಕಾ ಕೇಂದ್ರಗಳ ವಿವರ, ಶಾಲೆಗಳ ವಿವರ ಮತ್ತು ಆಸ್ಪತ್ರೆಗಳ ವಿವರಗಳನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಗುರುತಿಸಲು, ಐ.ಟಿ. ವಿಭಾಗಕ್ಕೆ ಮಾಹಿತಿ ನೀಡಲು ಸೂಚಿಸಿದರು.
- ಡಾ॥ ಕಲಾವತಿ ದೇವಿ.ಎಲ್.ಎ. ಆರ್.ಸಿ.ಹೆಚ್ ಅಧಿಕಾರಿ ರವರು ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 2,226 ಶಾಲೆಗಳು, 670 ಅಂಗನವಾಡಿ ಕೇಂದ್ರಗಳು ಹಾಗೂ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 15 ಲಕ್ಷ ಮಕ್ಕಳು ಇರುವುದಾಗಿ ತಿಳಿಸಿದರು. 209 ಕಿ.ಮ.ಅ.ಸಹಾಯಕಿಯರು, 58 ಶುಶ್ರೂಷಕಿಯರು ಹಾಗೂ 218 ಸಂಪರ್ಕ ಕಾರ್ಯಕರ್ತೆಯರು, 406 ಆಶಾ ಕಾರ್ಯಕರ್ತೆಯರು ಇರುವುದಾಗಿ ಸಭೆಗೆ ತಿಳಿಸಿದರು.
- ಐ.ಎಲ್.ಆರ್-63, ಡಿ-ಫ್ರೀಜರ್-73 ಇರುವುದಾಗಿ ತಿಳಿಸಿದರು.
- ಖಾಸಗಿ ಆಸ್ಪತ್ರೆಗಳು, ನರ್ಸಿಂಗ್ ಹೋಮ್‌ಗಳ ಅನುಭವಿ ಸಿಬ್ಬಂದಿಗಳನ್ನು ಅಭಿಯಾನ ಕಾರ್ಯಕ್ರಮಕ್ಕೆ ಬಳಸಿಕೊಳ್ಳಲಾಗುವುದೆಂದು ಆರ್.ಸಿ.ಹೆಚ್. ಅಧಿಕಾರಿ ತಿಳಿಸಿದರು.
- ಶಾಲಾ ವೇಳಾಪಟ್ಟಿಯ ಪ್ರಕಾರ ಕ್ರಿಯಾಯೋಜನೆಯನ್ನು ತಯಾರಿಸಿ, ಕಾರ್ಯಕ್ರಮವನ್ನು ನಡೆಸಲು ವ್ಯವಸ್ಥೆ ಮಾಡಿಕೊಳ್ಳುವಂತೆ ಮಾನ್ಯ ಆಯುಕ್ತರು ತಿಳಿಸಿದರು.
- ದಿನಕ್ಕೆ ಒಬ್ಬ ಕಿ.ಮ.ಆ.ಸಹಾಯಕಿ ದಿನಕ್ಕೆ 150 ರಿಂದ 200 ಮಕ್ಕಳಿಗೆ ಲಸಿಕೆ ನೀಡುವಂತೆ ವ್ಯವಸ್ಥೆ ಮಾಡಲಾಗಿದೆ.
- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪಾಲಿಕೆ ವ್ಯಾಪ್ತಿಯಲ್ಲಿ ಮೀಸಲ್ಸ್- ರುಬೆಲ್ಲಾ ಹೋರ್ಡಿಂಗ್‌ಗಳನ್ನು ಅಳವಡಿಸಲು ಜಾಗಗಳನ್ನು ಉಚಿತವಾಗಿ ನೀಡಲು ಮಾನ್ಯ ಆಯುಕ್ತರು ಸಭೆಯಲ್ಲಿ ಒಪ್ಪಿರುತ್ತಾರೆ.

- ಎಲ್ಲಾ ಖಾಸಗಿ ಶಾಲೆಗಳಿಗೆ ಮತ್ತು ಸರ್ಕಾರಿ ಶಾಲೆಗಳಿಗೆ ಇಲಾಖೆಯ ಉನ್ನತ ಅಧಿಕಾರಿಗಳಿಂದ ಪತ್ರವನ್ನು ನೀಡಲು ವ್ಯವಸ್ಥೆ ಮಾಡುವಂತೆ ಮಾನ್ಯ ಆಯುಕ್ತರು ಕಾರ್ಯಕ್ರಮದ ಅಧಿಕಾರಿಗಳಿಗೆ ಸಭೆಯಲ್ಲಿ ಸೂಚಿಸಿದರು.
- ಕೆಲವು ಶಾಲೆಗಳು ಲಸಿಕೆ ಹಾಕಲು ಸಹಕಾರ ನೀಡಲು ನಿರಾಕರಿಸಿದ್ದು, ಈ ಬಗ್ಗೆ ಸಭೆಗೆ ತಿಳಿಸಿದಾಗ ಮಾನ್ಯ ಆಯುಕ್ತರವರು ತಮ್ಮ ಕಛೇರಿಯಿಂದ ಆಯುಕ್ತರು ಸಿ.ಐ.ಇ.ಎಸ್.ಸಿ ನವದೆಹಲಿ ರವರಿಗೆ ಅಧ್ಯಕ್ಷರು ಕೆ.ವಿ.ಸ್ಕೂಲ್ ರವರು ಪತ್ರ ರವಾನಿಸಲು ಸೂಚಿಸಿರುತ್ತಾರೆ.
- ಈಗಾಗಲೇ ಇರುವ ಸ್ಟೂಡೆಂಟ್ ಟ್ರ್ಯಾಕಿಂಗ್ ಸೀಸ್ಟಮ್ ನಲ್ಲಿ ಎಲ್ಲಾ ಶಾಲೆಗಳ ಮಕ್ಕಳ ದತ್ತಾಂಶ ಇದ್ದು, ಅದನ್ನು ಬಳಸಿಕೊಳ್ಳಲು ಮಾನ್ಯ ಆಯುಕ್ತರು ಸೂಚಿಸಿದರು.
- ಮಸೀದಿ, ಚರ್ಚೆಗಳ ಮುಖ್ಯಸ್ಥರು, ಸ್ವಯಂಸೇವಾ ಸಂಸ್ಥೆಗಳು ಹಾಗು ನಗರ ಪ್ರದೇಶಗಳು/ ಕೊಳಚೆ ಪ್ರದೇಶಗಳ ಮುಖ್ಯಸ್ಥರುಗಳ ಸಭೆಯನ್ನು ನಡೆಸುವುದು ಮತ್ತು ಸಾರ್ವಜನಿಕರಿಗೆ ಅಭಿಯಾನದ ಬಗ್ಗೆ ವ್ಯಾಪಕ ಪ್ರಚಾರವನ್ನು ನೀಡುವಂತೆ ವ್ಯವಸ್ಥೆ ಮಾಡುವಂತೆ ಮಾನ್ಯ ಆಯುಕ್ತರು ಸಭೆಯಲ್ಲಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.
- ಮೀಸೆಲ್ಸ್-ರುಬೆಲ್ಲಾ ಚುಚ್ಚುಮದ್ದು ಅಭಿಯಾನದ ಕಾರ್ಯಕ್ರಮದ ಬಗ್ಗೆ ಪತ್ರಿಕೆಗಳು ಮತ್ತು ದೂರದರ್ಶನದ ಮುಖಾಂತರ ಜಾಹೀರಾತು/ ಪ್ರಚಾರವನ್ನು ನೀಡಲು ವ್ಯವಸ್ಥೆ ಮಾಡುವಂತೆ, ಪೂಜ್ಯ ಮಹಾಪೌರರು ರವರಿಂದ ಪ್ರತಿಕಾಗೋಷ್ಠಿ ನಡೆಸಲು ಹಾಗೂ ಈ ಅಭಿಯಾನವನ್ನು ಯಶಸ್ವಿಯಾಗಿ ನಡೆಸಲು ಸಾರ್ವಜನಿಕರಿಗೆ ಅರಿವು ಮೂಡಿಸುವ ಬೃಹತ್ ಜನ ಜಾಗೃತಿ ಜಾಥಾ ನಡೆಸಲು ಆರ್.ಸಿ.ಹೆಚ್ ಅಧಿಕಾರಿಗೆ ಸಭೆಯಲ್ಲಿ ತಿಳಿಸಿದರು. ಇದಕ್ಕೆ ಆರ್.ಸಿ.ಹೆಚ್ ಅಧಿಕಾರಿಗಳು ಸಭೆಯಲ್ಲಿ ದಿನಾಂಕ: 04-02-2017 ರಂದು ಜಾಥಾವನ್ನು ಏರ್ಪಡಿಸಲಾಗಿದೆಂದು ಸಭೆಗೆ ತಿಳಿಸಿದರು.
- ಎಲ್ಲಾ ಆರೋಗ್ಯ ಕೇಂದ್ರ, ನಗರ ಕುಟುಂಬ ಕಲ್ಯಾಣ ಕೇಂದ್ರ, ಔಷಧಾಲಯಗಳಲ್ಲಿ ಮೀಸೆಲ್ಸ್-ರುಬೆಲ್ಲಾ ಅಭಿಯಾನದ ಕ್ರಿಯಾ ಯೋಜನೆಯಂತೆ ಚುಚ್ಚುಮದ್ದು ನೀಡುವವರು/ ಲಸಿಕಾ ಕಾರ್ಯಕರ್ತೆಯರಿಗೆ ಹಾಗೂ ಸಹಾಯಕರುಗಳಿಗೆ ಮೊದಲ ಹತ್ತು ದಿನಗಳಲ್ಲಿ ಪ್ರತಿ ದಿನ ಒಬ್ಬ ಕಾರ್ಯಕರ್ತೆಗೆ ರೂ.75 ಊಟಕ್ಕೆ ಬಳಸಲು ಮಾನ್ಯ ಆಯುಕ್ತರವರು ಪಾಲಿಕೆಯ ನಿಧಿಯಿಂದ ಭರಿಸಲು ಸೂಚಿಸಿರುತ್ತಾರೆ. ಸಂಬಂಧಪಟ್ಟ ವೆಚ್ಚದ ರಸೀದಿಗಳನ್ನು ಆರೋಗ್ಯ ವೈದ್ಯಾಧಿಕಾರಿಗಳು ಸಿದ್ದಪಡಿಸಿ ವಲಯ ಆರೋಗ್ಯಾಧಿಕಾರಿಗಳಿಗೆ ನೀಡುವಂತೆ ಸಭೆಯಲ್ಲಿ ಚರ್ಚಿಸಲಾಯಿತು
- ಬಿಬಿಎಂಪಿ ವ್ಯಾಪ್ತಿಯಲ್ಲಿ ಹೆಚ್ಚು ಜನಸಂಖ್ಯೆ ಮತ್ತು ಮಕ್ಕಳು ಇರುವುದರಿಂದ ಈ ಬಗ್ಗೆ ಹೆಚ್ಚುವರಿಯಾಗಿ ಬೇಕಾಗಿರುವ ಐ.ಇ.ಸಿ ಸಾಮಗ್ರಿಗಳಾದ ಪೋಸ್ಟರ್ಸ್, ಬ್ಯಾನರ್ಸ್, ಕರಪತ್ರಗಳು ಭಿತ್ತಿಪತ್ರಗಳು ಎನ್.ಹೆಚ್.ಎಂ ವತಿಯಿಂದ ಭರಿಸಲು ಮಾನ್ಯ ಆಯುಕ್ತರು ಒಪ್ಪಿಗೆ ನೀಡಿರುತ್ತಾರೆ.
- ಮೆಡಿಕಲ್ ಕಾಲೇಜಿನ ವೈದ್ಯರು, ನರ್ಸಿಂಗ್ ಹೋಮ್ ವೈದ್ಯರು ಹಾಗೂ ಸಿಬ್ಬಂದಿ ವರ್ಗದವರನ್ನು ಕರೆತರಲು 12 ದೊಡ್ಡ ವಾಹನಗಳ ಅವಶ್ಯಕತೆ ಇದ್ದು, ಇದರ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿದ್ದು, ಬಿಬಿಎಂಪಿ ಸಾರಿಗೆ ಇಲಾಖೆ ಅಧಿಕಾರಿಯವರಿಗೆ ಮಾನ್ಯ ಆಯುಕ್ತರು ವಾಹನಗಳನ್ನು ನೀಡುವಂತೆ ಸಭೆಯಲ್ಲಿ ಸೂಚಿಸಿರುತ್ತಾರೆ.
- ಪಾಲಿಕೆಯ PHIEC ಮೂಲಕ ಎಲ್ಲಾ ಆಸ್ಪತ್ರೆಗಳಿಗೆ ಮೀಸೆಲ್ಸ್ – ರುಬೆಲ್ಲಾ ಕಾರ್ಯಕ್ರಮದ ಸಂದೇಶವನ್ನು PHIEC ಕಛೇರಿಯಿಂದ ಕಳುಹಿಸುವಂತೆ ಸಂಬಂಧಪಟ್ಟ ಅದಿಕಾರಿಗಳಿಗೆ ಸಭೆಯಲ್ಲಿ ಮಾನ್ಯ ಆಯುಕ್ತರು ತಿಳಿಸಿದರು.
- ಮಾನ್ಯ ಆಯುಕ್ತರು ವಲಯ ಆರೋಗ್ಯಾಧಿಕಾರಿಗಳಿಗೆ ತಮ್ಮ ಕ್ಷೇತ್ರದಲ್ಲಿ ಬರುವ ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್‌ಗಳನ್ನು ಸಂಪರ್ಕಿಸಿ, ಅಭಿಯಾನಕ್ಕೆ ಸಿಬ್ಬಂದಿ ನೀಡಲು ಕೋರುವುದು

ಮತ್ತು ತಮ್ಮ ವ್ಯಾಪ್ತಿಯಲ್ಲಿ ಬರುವ ಹತ್ತಿರದ ಶಾಲೆಗಳಲ್ಲಿ ಅಭಿಯಾನಕ್ಕೆ ಸಿಬ್ಬಂದಿಯನ್ನು ಒದಗಿಸುವುದರ ಮೂಲಕ ಅಭಿಯಾನವನ್ನು ಯಶಸ್ವಿಗೊಳಿಸುವಂತೆ ಸೂಚಿಸಿದರು.

ಸಭೆಯನ್ನು ವಂದನೆಯೊಂದಿಗೆ ಮುಕ್ತಾಯಗೊಳಿಸಲಾಯಿತು.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಪ್ರತಿಗಳು:-**

1. ಪೂಜ್ಯ ಮಹಾಪೌರರು ರವರಿಗೆ ಆಪ್ತಶಾಖೆಯ ಮೂಲಕ ಮಾಹಿತಿಗಾಗಿ ಸಲ್ಲಿಸಿದೆ.
2. ಉಪ ಮಹಾಪೌರರು ರವರಿಗೆ ಆಪ್ತಶಾಖೆಯ ಮೂಲಕ ಮಾಹಿತಿಗಾಗಿ ಸಲ್ಲಿಸಿದೆ.
3. ಜಂಟಿ ಆಯುಕ್ತರು (ಆರೋಗ್ಯ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ 8 ವಲಯ ಜಂಟಿ ಆಯುಕ್ತರು (ಆರೋಗ್ಯ) ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
5. ಉಪ ನಿರ್ದೇಶಕರು, ಲಸಿಕೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ಮುಖ್ಯ ಆರೋಗ್ಯಾಧಿಕಾರಿ(ಕ್ಲಿನಿಕಲ್)., ಬಿ.ಬಿ.ಎಂ.ಪಿ. ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
7. ಮುಖ್ಯ ಆರೋಗ್ಯಾಧಿಕಾರಿ(ಸಾ.ಆ)., ಬಿ.ಬಿ.ಎಂ.ಪಿ. ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
8. ಡಾ॥ ಲೋಕೇಶ್. ಎಸ್.ಆರ್.ಟಿ.ಎಲ್ ಕರ್ನಾಟಕ ವಿಶ್ವ ಆರೋಗ್ಯ ಸಂಸ್ಥೆ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
9. ಎಸ್.ಎಂ.ಓ. ಎನ್.ಪಿ.ಎಸ್.ಪಿ. ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
10. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ, ಬಿಬಿಎಂಪಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
11. ಜಿಲ್ಲಾ ಆರ್.ಸಿ.ಹೆಚ್ ಅಧಿಕಾರಿ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
12. ಮುಖ್ಯಸ್ಥರು, ಸಮುದಾಯ ವಿಭಾಗ, ಎಂ.ಎಸ್.ರಾಮಯ್ಯ/ ಕೆಂಪೇಗೌಡ/ ಸೆಂಟೇಜಾನ್ಸ್ / ಬೆಂಗಳೂರು ವೈದ್ಯಕೀಯ ಮಹಾವಿದ್ಯಾನಿಲಯ, ಬೆಂಗಳೂರು. ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
13. ಕ್ಷೇತ್ರಾ ಶಿಕ್ಷಣಾಧಿಕಾರಿಗಳು ಬೆಂಗಳೂರು ಉತ್ತರ/ದಕ್ಷಿಣ/ಬಿಬಿಎಂಪಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
14. ಶಿಶು ಅಭಿವೃದ್ದಿ ಅಧಿಕಾರಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ. ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
15. ಎಲ್ಲಾ ವಲಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್)/ ಉಪ ಆರೋಗ್ಯಾಧಿಕಾರಿಗಳು/ ಆರೋಗ್ಯ ವೈದ್ಯಾಧಿಕಾರಿಗಳು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
16. ರೋಟರಿ ಪ್ರತಿನಿಧಿ ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
17. ವೈದ್ಯರು ಕಾಮ್ಯಾಂಡೋ ಆಸ್ಪತ್ರೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
18. ವೈದ್ಯರು ಡಿ.ಆರ್.ಡಿ.ಓ. ಆಸ್ಪತ್ರೆ, ಬೆಂಗಳೂರು ರವರಿಗೆ ಮಾಹಿತಿಗಾಗಿ ಕಳುಹಿಸಿದೆ.
19. ಕಛೇರಿ ಕಡತ.